ತಾರೀಖು 16ನೆ ಏಪ್ರಿಲ್ 1907.

ನಂ. ರೆ. 9271 —ಲ್ಯಾ. ರೆ. 508-06—2, ಕುಣಿಗಲ್ ತಾಲ್ಲೂಕು ಅಮಲ್ದಾರ್ ವಿ॥ ಎಂ. ರಂಗನಾಥರಾಯರಿಗೆ ಮೈಸೂರು ಸರ್ವಿಸ್ ರಗ್ಯುಲೇಷನುಗಳ 206ನೆ ಪ್ರಕರಣದ ಮೇರೆಗೆ 1907ನೆ ಇಸವಿಯ ಮಾರ್ಚಿ 19ನೆ ತಾರೀಖಿನಿಂದ ವೈದ್ಯರ ಸರ್ಟಿಫಿಕೇಟಿನ ಮೇಲೆ ಎರಡು ತಿಂಗಳ ರಜಾ ಕೊಟ್ಟಿದೆ.

ತಾರೀಖು 16ನೆ ಏಪ್ರಿಲ್ 1907.

ನಂ. 927 4—ಎಲ್. ಆರ್. 213-06—8, ಪಾವಗಡ ತಾಲ್ಲೂಕು ಅಮಲ್ದಾರ್ ವಿ॥ ಬಿ. ಕೇಸರಸಿಂಗೈರವರನ್ನು ಕುಣಿಗಲ್ ತಾಲ್ಲೂಕಿಗೆ ವರ್ಗಾಯಿಸಿ ಇದೆ. ಕೂಡಲೆ ಹೋಗಿ ಸೇರತಕ್ಕದ್ದು.

ಬವೋಜೀಬ್ ಹುಕುಂ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಟೆರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಕ್ಷನ್ಸ್.

ತಾರೀಖು 18ನೆ ಏಪ್ರಿಲ್ 1907.

ನಂ. 366—2780, ಮೈಸೂರು ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ವಿ॥ ಬಿ. ಸುಬ್ಬರಾವ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಒಂದುವರೆ ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬವೋಜೀಬ್,
ಬರ್ನಾರ್ಡ್ ಡಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಅಂಡರ್ ಸೆಕ್ರಟೆರಿ.